Business of the House

*ಶ್ರೀ ಕೆ. ಕೆಂಚಪ್ಪ (ಹಿರಿಯೂರು).—ಸ್ವಾಮಿ, ಈ ಸಭೆಯ ಕಾರ್ಯಕಲಾಪಗಳ ವಿಚಾರವನ್ನು ಈಗ ಗವಾನಕ್ಕೆ ತರುತ್ತಿರುವುದು ಇದು ಮೂರನೆಯ ಬಾರಿ. ಒಂದು ವಾರ ಮುಂಚೆ ಅದರೂ ಈ ಸಭೆಯ ಕಾರ್ಯ ಕಲಾಪಗಳನ್ನು ಹೇಳಬೇಕಾದದ್ದು ಸಭಾನಾಯಕರ ಕರ್ತವ್ಯವೆಂದು ಮೊನ್ನೆ ಸಹ ಹೇಳಿದೆ. ಈ ಅನಿಶ್ಚಿತ ಪರಿಸ್ಥಿತಿ ಮುಂದುವರಿಯುಬಾರದು. ಈಗ ನನಗೆ ಬಕಟ್ಟಿನ ಪ್ರಸಂಗ ಬಂದಿದೆ. ಸತ್ಸಂಪ್ರದಾಯ ಗಳನ್ನು ಪಾಲನೆ ಮಾಡಬೇಕೆಂದು ಕೇಳುವುದೇ ಕಷ್ಟ ವಾಗಿದೆ. ಈಗ ಅನುಮಾನ ಬಂದಿದೆ. ಏನೆಂದರೆ ದ್ವಿತೀಯ ಪಂಚವಾರ್ಷಿಕ ಯೋಜನೆಯ ವಿಚಾರ ಇಲ್ಲಿ ಚರ್ಚೆಗೆ ಬರುವುದೇ, ಗೋರ್ವಾಲಾ ವರದಿ ಚರ್ಚೆ ಯಾಗುವುದೇ, ವಿದ್ಯುಚ್ಛಕ್ತಿ ಬೋರ್ಡ್‌ವರದಿಗೆ ಅವ ಕಾಶವಿದೆಯೆ, ಇಲ್ಲವೆ, ಇದಕ್ಕೆ ಷಷ್ಟ್ಯಬ್ದಿವನ ಈ ಸಭೆಗೆ ಅವಕಾಶಕೊಡುತ್ತೀರಿ ಎಂಬುದು ಸ್ಪಷ್ಟವಾಗಿಲ್ಲ. ಈ ವಿಚಾರವನ್ನು ಕೇಳಿದರೆ ಸ್ವಲ್ಪ ದಿವಸಗಳಲ್ಲಿ ವಿಶದವಾಗಿ ಹೇಳುವುದಾಗಿ ತಿಳಿಸಿದರು. ಆದರೆ ಇನ್ನೂ ಹೇಳಲಿಲ್ಲ. ಈ ಸಭಾನಾಯಕರು ದೇಶದ ನಾಯಕರೂ ಆಗಿರು ತ್ತಾರೆ. ಅಧ್ಯಕ್ಷರೂ ಸಹ ಈ ಸಭೆಗೂ ಮತ್ತು ದೇಶಕ್ಕೂ ನಾಯಕರು. ಅವರು ಎಲ್ಲವನ್ನೂ ನಿಶ್ಚಯಿಸಿ ನಮಗೆ ತಿಳಿವಳಿಕೆ ನೀಡಬೇಕಾದದ್ದು ಅವರ ಕರ್ತವ್ಯ. ಎಷ್ಟು ದಿವಸ ಈ ಸಭೆ ನಡೆಯುತ್ತದೆಂಬುದನ್ನು ಹೇಳಬೇಕು. ನನಗೆ ಬಂದಿರುವ ಭಾವನೆಯ ಪ್ರಕಾರ ಈಗ ಖಾಸಗಿ ನಿರ್ಣಯಗಳ ಮೇಲೆ ಸರ್ಕಾರಿ ಕೆಲಸಗಳನ್ನು ಹೇರಿ ಆ ನಿರ್ಣಯಗಳನ್ನು ಕ್ರಿಪ್ ಮಾಡುವ ಪರಿಸ್ಥಿತಿಯಿದೆ. ಹಾಗೆ ಕ್ರಿಪ್‌ಮಾಡುವುದರಿಂದ ಈ ಸಭಾ ಸದಸ್ಯರ ಹಕ್ಕು ಬಾಧ್ಯತೆಗೆ ಚ್ಯುತಿ ಬರುತ್ತದೆ. ಅದು ಬರಬಾರದೆಂಬ ದೃಷ್ಟಿಯಿಂದ ನಾನು ಕೇಳುವುದೇನೆಂದರೆ, ಅಧ್ಯಕ್ಷರು ಮತ್ತು ಸಭಾನಾಯಕರು ಕರೆತು ಕಾರ್ಯ ಕಲಾಪ ನಿಗದಿ ಮಾಡಬೇಕು. ನಾನು ಅದನ್ನು ತಿಳಿದು ತಯಾರಾಗಿ ಬರಬೇಕಾಗಿದೆ. ಆದರಿಂದ ವಿಶದವಾಗಿ ಈ ಸಭೆ ಎಷ್ಟು ದಿನ ನಡೆಯುತ್ತದೆ, ಏನು ಕಾರ್ಯ ಕ್ರಮವಿದೆ ಎಂಬುದನ್ನು ಹೇಳಿ ಸದಸ್ಯರು ತಮ್ಮ ಕರ್ತವ್ಯ ವನ್ನು ಸಮರ್ಪಕವಾಗಿ ನಿರ್ವಹಣೆಮಾಡಲು ಅವಕಾಶ ಕಲ್ಪಿಸಿಕೊಡಬೇಕೆಂದು ಕೇಳುತ್ತಿದ್ದೇನೆ.

ಶ್ರೀ ಎಸ್. ಹುಚ್ಚಮಾಸ್ತಿಗೌಡ (ಚಂದ್ರಶೇಖರ ಪುರ).—ಮೊದಲನೆ ಕಾರ್ಯಕ್ರಮದ ಪ್ರಕಾರ ಈ ಅಧಿ ವೇಶನದಲ್ಲಿ ಎರಡನೆಯ ಪಂಚವಾರ್ಷಿಕ ಯೋಜನೆಯ ಚರ್ಚೆಗೂ ಮತ್ತು ಗೋರ್ವಾಲರವರ ವರದಿ ಚರ್ಚೆಗೂ ಅವಕಾಶವಿತ್ತು. ಈಗ ಅವು ಕಾರ್ಯಕ್ರಮಪಟ್ಟಿಯಲ್ಲಿ ಸೇರಿಲ್ಲ. ಅದಕ್ಕೆ ಕಾರಣವೇನು, ಈ ಅಧಿವೇಶನದಲ್ಲಿ ಅದನ್ನು ತೆಗೆದುಕೊಳ್ಳಲಾಗುವುದೆ ಎಂಬುದನ್ನು ಕೂಡ ತಿಳಿಸಬೇಕು.

ಶ್ರೀ ಟಿ. ಎನ್. ಮೂಡಲಗಿರಿಗೌಡ (ಕೋಲಾರ ಚಿನ್ನದ ಗಣಿಗಳು).—ಈಗ ನಮ್ಮ ಮುಂದೆ ಬಿಜನೆಸ್ ಅಡ್ವೈಜರಿ ಕಮಿಟಿಯ ರಿಪೋರ್ಟ್ ಇದೆ, ಈ ಸಭೆಯಲ್ಲಿ ನಡೆಯುತಕ್ಕ ಕೆಲಸ ಕಾರ್ಯಗಳನ್ನು ಪರಿಶೀಲನೆಮಾಡಿ ಈ ಕಮಿಟಿಯು ವರದಿ ಒಪ್ಪಿಸತಕ್ಕ ಒಂದು ಪದ್ಧತಿ ಇದೆ. ಹೀಗೆ ಇರು ವಾಗ ಈ ವಿಷಯವನ್ನು ಮತ್ತೆ ಮತ್ತೆ ಚರ್ಚಿಸ ತಕ್ಕಂಥಾದ್ದು ಏಕೆ? ಈ ವಿಷಯದ ಬಗ್ಗೆ ಅನು ಮಾನಕ್ಕೆ ಎಡೆ ಕೊಡತಕ್ಕಂಥಾದ್ದು ಅರ್ಥವಾಗುವ ದಿಲ್ಲ. ಇದನ್ನು ಬಿಜನೆಸ್ ಅಡ್ವೈಜರಿ ಕಮಿಟಿಯಲ್ಲಿ ತೀರ್ಮಾನಮಾಡಿ ಅದನ್ನು ಸಭೆಯ ಮುಂದೆ ತರಬಹುದು. ಈ ಪ್ರಶ್ನೆ ಪದೇ ಪದೇ ಈ ಸಭೆಯ ಮುಂದೆ ಏತಕ್ಕೆ ಬರುತ್ತದೆ ಎಂಬುದನ್ನು ತಿಳಿಸಬೇಕು.

ಶ್ರೀ ಬಿ. ಡಿ. ಜತ್ತಿ (ಮುಖ್ಯಮಂತ್ರಿಗಳು).—ಈಗಾ ಗಲೇ ಬಿಜಿನೆಸ್ ಅಡ್ವೈಜರಿ ಕಮಿಟಿಯಲ್ಲಿ ಇದು ನಿರ್ಣಯ ವಾಗಿದೆ. ಈ ಸಭೆಯಲ್ಲಿ ಚರ್ಚೆ ನಡೆಯಬೇಕಾದ ದಿವಸಗಳನ್ನು ಕಡಮೆಮಾಡುವ ವಿಚಾರವಿಲ್ಲ. Land Reforms ಬಿಲ್ಲನ್ನು ಈ ಸಭೆಯಲ್ಲಿ introduce ಮಾಡಬೇಕಾಗಿದೆ. ಈ ಬಿಲ್ಲು ಈಗಾಗಲೇ ಸಿದ್ಧವಾಗಿದೆ. ಅದಕ್ಕೆ ಹೆಚ್ಚಿನ ಪ್ರಾಶಸ್ತ್ಯಕೊಟ್ಟು ಇವೊತ್ತಿನ ದಿವಸ ಅಧ್ಯಕ್ಷರ ಸ್ಪೆಷಲ್ ಪರ್ಮಿಷನ್ ತೆಗೆದುಕೊಂಡು introduce ಮಾಡಬೇಕೆಂದು ಇದೆ. ಅದು ಬಹಳ ಮಹತ್ವದ ಬಿಲ್ಲು ಆಗಿದೆ. ಇನ್ನು ಉಳಿದ ಕೆಲಸ ಕಾರ್ಯಗಳ ಬಗ್ಗೆ ವಿಚಾರಮಾಡಿ ಒಂದು ವ್ಯವಸ್ಥೆ ಮಾಡಲಾಗುವುದು. ಸರಕಾರದ ಹತ್ತರ ಮಾಡತಕ್ಕ ಕೆಲಸ ಇನ್ನೂ ಹೆಚ್ಚಾಗಿ ಇದೆ. ಈ ಸಭೆ ಮತ್ತು ಅಧ್ಯಕ್ಷರು ವಿಚಾರಮಾಡಿ ಒಂದು ನಿರ್ಧಾರಕ್ಕೆ ಬಂದು ಕೆಲಸಮಾಡಬಹುದು.

ಶ್ರೀ ಕೆ. ಕೆಂಚಪ್ಪ.—ಇದು ಒಂದು ವಾರದ ಪ್ರೋಗ್ರಾಂ ಅಲ್ಲ. ಸಂಪ್ರದಾಯಕ್ಕೆ ಅನುಸಾರವಾಗಿ ಒಂದು ವಾರದ ಕಾರ್ಯಕ್ರಮ ತಿಳಿಸಬೇಕೆಂದು ನಾನು ಒತ್ತಾಯ ಪೂರ್ವಕವಾಗಿ ಹೇಳುತ್ತೇನೆ.

ಅಧ್ಯಕ್ಷರು.—ಅದರಲ್ಲಿ ತೊಂದರೆಗಳಿವೆ.

Sri J. B. MALLARADHYA (Nanjangud).—Why are you postponing the discussion on the Five-Year Plan and Gorwala Report which is included in the Agenda? We are grateful to the Chief Minister for bringing the Land Reform Bill after all in this Session. But with regard to the other important matter, I do not see why they do not extend the session.

ಶ್ರೀ ಕೆ. ಕೆಂಚಪ್ಪ.—ಎರಡನೆಯ ಪಂಚವಾರ್ಷಿಕ ಯೋಜನೆ ಮತ್ತು ಗೋರ್ವಾಲಾಕಮಿಟಿ ರಿಪೋರ್ಟ್ ಇವೆ. ಇವುಗಳ ಚರ್ಚೆಯ ಬಗ್ಗೆ ಏನು ಮಾಡುತ್ತೀರಿ?

ಶ್ರೀ ಕಡಿದಾಳ್ ಮಂಜಪ್ಪ (ರೆವಿನ್ಯೂ ಇರಿಗೇಷನ್ ಮಂತ್ರಿಗಳು),—ತಾವೂ, ನಾವೂ, ಅಧ್ಯಕ್ಷರೂ ಕೂಡಿ ಒಂದು ನಿರ್ಧಾರಮಾಡಬೇಕಾಗುತ್ತದೆ. ಯಾವ ವಿಷಯದ ಚರ್ಚೆಗೆ ಪ್ರಾಮುಖ್ಯತೆಕೊಡಬೇಕು ಎಂಬು ದನ್ನು ನಾವೆಲ್ಲ ಪಡೆದು ತೀರ್ಮಾನ ಮಾಡಲಾಗುವುದು.

ಶ್ರೀ ಕೆ. ಕೆಂಚಪ್ಪ.—ಸಂಪ್ರದಾಯದ ಪ್ರಕಾರ ಕೆಲಸ ನಡೆಯಬೇಕು.

ಅಧ್ಯಕ್ಷರು.—ತಾವು ವಿರೋಧ ಪಕ್ಷದ ನಾಯಕ ರಾಗಿದ್ದೀರಿ. ತಾವೂ ಸಭಾನಾಯಕರೂ ನಾವೂ ಕರೆತು ಮಾತನಾಡೋಣ ಮತ್ತು ಒಂದು ನಿರ್ಧಾರಕ್ಕೆ ಬರೋಣ.

Sri M. C. NARASIMHAN (Kolar Gold Fields).—Land Reforms Bill—Is it proposed to be discussed or is it proposed to be just introduced?

Mr. SPEAKER.—It will be introduced now. Seven days will have to elapse before it can be taken into consideration under the rules.

Sri M. C. NARASIMHAN.—Who is the authority that determines the life of this session? The Hon'ble the Chief Minister was pleased to say that it was the Hon'ble Speaker. The Hon'ble

(SRI M. C. NARASIMHAN)

Speaker was pleased to say that it rests with the Leader of the House.

Mr. SPEAKER.—I have already said that it is the Leader of the House who determined the period for which this Assembly should sit. It is the Leader of the House who gives work. I determine the time we should sit.

Sri C. J. MUCKANNAPPA (Gubbi).—Shall we take it for granted that there is no work?

ಶ್ರೀ ಬಿ. ಡಿ. ಜತ್ತಿ.—ಸಾಕಷ್ಟು ಕೆಲಸ ಸರಕಾರದ ಹತ್ತಿರ ಈಗ ಇದೆ. ಕೆಲಸವಿಲ್ಲದೆ ಬೇಗ ಮುಗಿಸಬೇಕು ಎಂಬ ಅಭಿಪ್ರಾಯ ನನಗಿಲ್ಲ. ಎಲ್ಲಿಯವರೆಗೆ ಸಭೆಯ ಕಾರ್ಯಕಲಾಪವನ್ನು ನಡೆಸಬೇಕು ಎಂಬುದನ್ನು ನೀವು ನಿರ್ಧಾರಮಾಡುತ್ತೀರಿ.

ಶ್ರೀ ಕೆ. ಪುಟ್ಟಸ್ವಾಮಿ (ಮೈಸೂರು).—ಸಭೆಯ ನಡುವಳಿಕೆಯ ಬಗ್ಗೆ ಮಾತನಾಡಬೇಕೆಂದರೆ ನನಗೆ ಅವಕಾಶವನ್ನೇ ಕೊಡುವದಿಲ್ಲ.

ಅಧ್ಯಕ್ಷರು.—ಈಗ ಆ ಪ್ರಶ್ನೆ ನಮ್ಮ ಮುಂದೆ ಇಲ್ಲ. ಈಗ ಇದನ್ನು ಮುಗಿಸಿಬಿಡೋಣ.

Sri K. PUTTASWAMY.—I just want to know what has happened to my letter to the Speaker requesting to fix time for discussing the Public Service Commission Report. I am not allowed to draw attention to that.

Mr. SPEAKER.—It is under my consideration.

ಶ್ರೀ ಕೆ. ಪುಟ್ಟಸ್ವಾಮಿ.—ನಾನು ಕಾಗದ ಬರೆದಿದ್ದರೂ ಸಹ ಅದಕ್ಕೆ ಉತ್ತರ ಇಲ್ಲ. ನಾನು ಪ್ರಾರ್ಥನೆ ಮಾಡಿಕೊಂಡರೂ ಅದಕ್ಕೆ ಗಮನಕೊಡಲಿಲ್ಲ. ನಡವಳಿಕೆಯ ಬಗ್ಗೆ ಕ್ರಮಬದ್ಧವಾಗಿ ನಿಂತು ಹೇಳಬೇಕೆಂದರೆ ಅವಕಾಶ ದೊರೆಯುತ್ತಿಲ್ಲ. ಸಭೆಯು ಮುಂದಿರುವ ವಿಷಯವನ್ನು ಬಿಟ್ಟುಕೊಟ್ಟು ಕ್ರಮಬದ್ಧವಾಗಿದ ಹಾಗೆ ಯಾರಾದರೂ ಉಚ್ಚಾರಣೆ ಮಾತನಾಡಿದರೆ ಅಂಥವರಿಗೆ ಮಾತನಾಡಲು ಅವಕಾಶ ಸಿಕ್ಕುತ್ತದೆ.

ಅಧ್ಯಕ್ಷರು.—ಹೀಗೆ ಮಾತನಾಡುತ್ತಾ ಹೋದರೆ ಅದಕ್ಕೆ ಕೊನೆಯೇ ಇಲ್ಲ. ಆ ವಿಷಯವನ್ನು ನಾವು ವಿಚಾರ ಮಾಡುತ್ತಿದ್ದೇವೆ. ಅದರ ಬಗ್ಗೆ ಒಂದು ನಿರ್ಧಾರ ಮಾಡುತ್ತೇವೆ. ಈಗ ಸಭೆಯ ಮುಂದೆ ಇರುವ ಮುಂದಿನ ವಿಷಯಕ್ಕೆ ಹೋಗೋಣ.

PAPERS LAID ON THE TABLE

SECRETARY.—I beg to lay on the Table of the House.—

The Mysore Public Service Commission (Conduct of Business and Additional Functions) Bill, 1958,

The Mysore Maternity Benefit Bill, 1958,

The Cotton Ginning and Pressing Factories (Mysore Amendment) Bill, 1958, and

The Mysore Societies Registration Bill, 1958, as passed by the Legislative Council.

Sri H. M. CHANNABASAPPA (Minister for Public Works and Electricity).—Sir, I beg to lay on the Table a Supplementary financial statement of the Mysore State Electricity Board as required under Section 61 (5) of the Indian Electricity (Supply) Act, 1948.

REPORT OF THE BUSINESS ADVISORY COMMITTEE.

Sri L H. THIMMA BOVI (Deputy Speaker).—I move:

"That the Assembly agrees with the eighth Report of the Business Advisory Committee."

Mr. SPEAKER.—The question is:

"That the Assembly agrees with the eighth Report of the Business Advisory Committee."

The motion was adopted.

MADRAS PRESERVATION OF PRIVATE FORESTS CONTINUANCE BILL, 1958.

Motion to consider.

Sri K. F. PATIL (Minister for Agriculture)—Sir, I beg to move:

"That the Madras Preservation of Private Forests Continuance Bill, 1958, as passed by the Legislative Council, be taken into consideration."

Mr. SPEAKER.—Motion moved:

"That the Madras Preservation of Private Forests Continuance Bill 1958, as passed by the Legislative Council, be taken into consideration."

Sri K. F. PATIL.—Sir, this is a Bill whose life was extended last year. The extension period ends in December 1958. Since a common law with regard to private forests as well as district forest, is being considered by the Government, it will not be completed